ಕರ್ನಾಟಕ ಸರ್ಕಾರ

(ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ:ಬಿಟಿಇ/13/ಇಪಿಎಸ್/2013.

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ:30-06-2016.

ಸು ತ್ತೋ ಲೆ

ವಿಷಯ: ತಾಂತ್ರಿಕ ಪರೀಕ್ಷಾ ಮಂಡಳಿಯ ಸಕಾಲ ಸೇವೆಗಳನ್ನು ಕಡ್ಡಾಯವಾಗಿ ಸಕಾಲ ತಂತ್ರಾಂಶದಲ್ಲೇ (SAKALA PORTAL) ನೀಡುವ ಬಗ್ಗೆ.

ಉಲ್ಲೇಖ:1.ಡಿಐಜಿ ಮತ್ತು ಅಪರ ಮಿಷನ್ ನಿರ್ದೇಶಕರು, ಸಕಾಲ ಮಿಷನ್ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಸಿ.ಆ.ಸು.ಇ./20/ನಾಸೇಖಾ/2016, ದಿನಾಂಕ:15-02-2016.
2.ಸರ್ಕಾರದ ಪತ್ರ ಸಂಖ್ಯೆ:ಇಡಿ 29 ಟಿಇಎಲ್ 2016, ದಿನಾಂಕ:05-03-2016.
3.ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ/13/ಇಪಿಎಸ್/2013. ದಿ:19-03-2016.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಪರೀಕ್ಷಾ ಮಂಡಳಿಯ ಹತ್ತು ಕಾರ್ಯಗಳನ್ನು ಸಕಾಲ ಕಾಯ್ದೆಯಡಿಯಲ್ಲಿ ಸೇವೆಗಳಾಗಿ ನೀಡಲಾಗುತ್ತಿದೆ. ಉಲ್ಲೇಖ(1)ರ ಪತ್ರದಲ್ಲಿ ಡಿಐಜಿ ಮತ್ತು ಅಪರ ಮಿಷನ್ ನಿರ್ದೇಶಕರು, ಸಕಾಲ ಮಿಷನ್ ಇವರು ತಾಂತ್ರಿಕ ಶಿಕ್ಷಣ ಇಲಾಖೆಯ ಎಲ್ಲಾ ಹತ್ತು ಸಕಾಲ ಸೇವೆಗಳನ್ನು ಸಕಾಲ ತಂತ್ರಾಂಶದಿಂದಲೇ ನೀಡಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿರುತ್ತಾರೆ. ಆದಕಾರಣ ಉಲ್ಲೇಖ(2)ರ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ) ಇವರ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ನೀಡಬೇಕಾಗಿರುವ ಸಕಾಲ ಸೇವೆಗಳಿಗೆ ಸಂಬಂಧಿಸಿದಂತೆ ಇಲಾಖೆಯಲ್ಲಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳಿಗೆ ಸಕಾಲ ತಂತ್ರಾಂಶದಿಂದಲೇ (SAKALA PORTAL) ನಿಗದಿತ ಕಾಲ ಮಿತಿಯೊಳಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಅದರಂತೆ ನಿಗದಿತ ಸೇವೆಗಳಿಗಾಗಿ ಅರ್ಹ ವಿದ್ಯಾರ್ಥಿಗಳಿಂದ ಸ್ವೀಕರಿಸಲಾಗುವ ಎಲ್ಲಾ ಅರ್ಜಿಗಳನ್ನು ಸಕಾಲ ಸೇವೆಯಡಿ ಕಡ್ಡಾಯವಾಗಿ ಸಕಾಲ ಮಿಷನ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿ GSC ACKNOWLEDGEMENT SLIP ಅನ್ನು ವಿದ್ಯಾರ್ಥಿಗಳಿಗೆ ನೀಡಲು ಮತ್ತು ವಿದ್ಯಾರ್ಥಿಗಳ ಅರ್ಜಿಗಳನ್ನು & ಪ್ರಿನ್ಸಿಪಾಲರಿಂದ ದೃಢೀಕರಿಸಲ್ಪಟ್ಟ ಅಗತ್ಯ ಲಗತ್ತುಗಳನ್ನು ಸಂಸ್ಥೆಯ ಹಂತದಲ್ಲಿಯೇ ಕೂಲಂಕುಷವಾಗಿ ಪರಿಶೀಲಿಸಿ ಮಂಡಳಿಗೆ ಕೂಡಲೆ ರವಾನಿಸಲು ಉಲ್ಲೇಖ(3)ರಲ್ಲಿ ಸೂಚಿಸಲಾಗಿತ್ತು.

ಅದಾಗ್ಯೂ ಬಹುತೇಕ ಸಂಸ್ಥೆಗಳ ಪ್ರಿನ್ಸಿಪಾಲರುಗಳು ನಿಗದಿತ ಸೇವೆಗಳಿಗಾಗಿ ವಿದ್ಯಾರ್ಥಿಗಳಿಂದ ಸ್ವೀಕರಿಸಲಾದ ಅರ್ಜಿಗಳನ್ನು SAKALA PORTAL ಮೂಲಕ ಸಲ್ಲಿಸದೇ ನೇರವಾಗಿ ತಾಂತ್ರಿಕ ಪರೀಕ್ಷಾ ಮಂಡಳಿಗೆ ರವಾನಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ ಮತ್ತು ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗಿದೆ.

ಪ್ರಯುಕ್ತ ಎಲ್ಲಾ ಸಂಸ್ಥೆಗಳ ಪ್ರಿನ್ಸಿಪಾಲರುಗಳು ಈ ವಿಷಯದಲ್ಲಿ ವೈಯಕ್ತಿಕ ಮುತುವರ್ಜಿ ವಹಿಸಲು ಮತ್ತು SAKALA PORTAL ಮೂಲಕ ವಿದ್ಯಾರ್ಥಿಗಳ ಅರ್ಜಿಗಳನ್ನು ಕಡ್ಡಾಯವಾಗಿ ಅಪ್‌ಲೋಡ್ ಮಾಡಲು ಮತ್ತೊಮ್ಮೆ ಸೂಚಿಸಿದೆ.

ಮೇಲ್ಕಂಡ ವಿಷಯಗಳಲ್ಲಿ ಸ್ಪಷ್ಟೀಕರಣಕ್ಕಾಗಿ ಶ್ರೀ ಹೆಚ್.ಟಿ.ಪ್ರಕಾಶ್, ತಾಂತ್ರಿಕ ಸಹಾಯಕರು, ಇವರನ್ನು 9900128504 ದೂರವಾಣಿಯಲ್ಲಿ ಸಂಪರ್ಕಿಸಬಹುದಾಗಿದೆ.

ಕಾರ್ಯದರ್ಶಿ

ಇವರಿಗೆ:

ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು – ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ:

1. ಉಪ ನಿರ್ದೇಶಕರು(ಪರೀಕ್ಷೆ), ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
2. ಸಹಾಯಕ ನಿರ್ದೇಶಕರು(ಪರೀಕ್ಷೆ) ಮತ್ತು (ತಾಂತ್ರಿಕ), ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
3. ಸಿಸ್ಟಂ ಅನಾಲಿಸ್ಟ್, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
4. ಪ್ರೋಗ್ರಾಮರ್(ಗಣಕ ಕೇಂದ್ರ), ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
5. ರಿಜಿಸ್ಟ್ರಾರ್(ಪರೀಕ್ಷೆ), ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
6. ಇಆರ್‌ಎಸ್/ಇಎಪಿ ಮತ್ತು ಆರ್‌ಡಿಎಂ(1) ರಿಂದ (15)ರ ವರೆಗಿನ ಕಾರ್ಯನಿರ್ವಾಹಕರು.
7. ಸ್ವೀಕೃತಿ ಹಾಗೂ ರವಾನೆ(ಪರೀಕ್ಷೆ) ವಿಭಾಗದವರು.
8. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
9. ನಿರ್ದೇಶಕರವರ ಆಪ್ತ ಶಾಖೆ.
10. ಕಾರ್ಯದರ್ಶಿಯವರ ಆಪ್ತ ಶಾಖೆ,
11. ಇ–ಆಡಳಿತ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
12. ಗಣಕ ಕೇಂದ್ರ – ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು.
13. ಶ್ರೀ ಹೆಚ್.ಟಿ.ಪ್ರಕಾಶ್, ತಾಂತ್ರಿಕ ಸಹಾಯಕರು – ಸಕಾಲ ಸೇವೆಗಳ ಉಸ್ತುವಾರಿ.